# ೨೦೨೩ – ೨೦೨೪ ರ ಜೂನ್ – ಆಗಸ್ಟ್ ತಿಂಗಳುಗಳಲ್ಲಿ ಕಲಿಯುವ ಹಾಡುಗಳು

**೧ನೇ ತರಗತಿಗೆ ಹಾಡುಗಳು**

೧. ಪಾಹಿ ಪಾಹಿ ಗಜಾನನ

೨. ಅಮ್ಮ ಅಮ್ಮ ಅಮ್ಮ ನನ್ನ ತೋಳಿಗೆ ರೆಕ್ಕೆ ಹಚ್ಚು

**೨ನೇ ತರಗತಿಗೆ ಹಾಡುಗಳು**

೩. ಫಲದಾಯಕ ನೀನೆ ಮತ್ತು ೪.ತಾರಮ್ಮಯ್ಯ

**೩ನೇ ತರಗತಿಗೆ ಹಾಡುಗಳು**

೫. ಸಾರಿ ಬಂದನೆ ಮತ್ತು ೬. ಪಾಲಯ ಪಾಲಯ ಪಾರ್ವತಿ ತನಯ

**೪ನೇ ತರಗತಿಗೆ ಹಾಡುಗಳು**

೭.ಅಂಬಿಗ ನಾ ನಿನ್ನ ನಂಬಿದೆ ಮತ್ತು ೮. ಮೋದಕ ಪ್ರಿಯನ

**೫ ನೇ ತರಗತಿಗೆ ಹಾಡುಗಳು**

೯. ತೋಳು ತೋಳು ತೋಳು ರಂಗ ಮತ್ತು ೧೦.ಬಾರೇ ನಮ್ಮನಿ ತನಕ

**೬ನೇ ತರಗತಿಗೆ ಹಾಡುಗಳು**

೧೧.ಇರಬೇಕು ಇರುವಂತೆ ಮತ್ತು ೧೨. ಬಾರೆ ಭಾಗ್ಯದ ನಿಧಿಯೆ

**೭ ನೇ ತರಗತಿಗೆ ಹಾಡುಗಳು**

೧೩.ಶ್ರೀ ರಾಮ ನಾಮ ಭಜಿಸಿದವಗೆ ಮತ್ತು ೧೪. ಬಂದೇವಯ್ಯ ಗೋವಿಂದ ಶೆಟ್ಟಿ

೧೫. ಗುರುವಿನ ಗುಲಾಮನಾಗುವ ತನಕ

**ಸೂಚನೆ:**

ದ.ರ.ಬೇಂದ್ರೆಯವರ ಈ ೫ ಹಾಡುಗಳು ನಾಲ್ಕರಿಂದ ಏಳನೇ ತರಗತಿಯ ಮಕ್ಕಳಿಗೆ ಮಾತ್ರ

**1.** ಪಾಹಿ ಪಾಹಿ ಗಜಾನನ ಪಾಹಿ ಪಾಹಿ ಗಜಾನನ।
ಪಾರ್ವತಿ ಪುತ್ರ ಗಜಾನನ ॥ಪ॥
ಮೂಷಿಕವಾಹನ ಗಜಾನನ। ಮೋದಕ ಹಸ್ತ ಗಜಾನನ ॥೧॥
.ವಾಮನರೂಪ ಗಜಾನನ। ವಿಲಂಬಿತಸೂತ್ರ ಗಜಾನನ ॥೨॥
ವಿಘ್ನವಿನಾಶಕ ಗಜಾನನ। ತವಪಾದ ನಮಸ್ತೆ ಗಜಾನನ ॥೩॥

**2.** ಅಮ್ಮ ಅಮ್ಮ ಅಮ್ಮ ನನ್ನ ತೋಳಿಗೆ ರೆಕ್ಕೆ ಹಚ್ಚು
ನನ್ನ ಸೊಂಟಕೆ ಬೆಳ್ಳಿ ಪಟ್ಟಿ ಕಟ್ಟಿ ಹಕ್ಕಿ ಪುಕ್ಕ ಚುಚ್ಚು
ಹಾರುತ್ತೇನೆ ರೆಕ್ಕೆ ಬಿಚ್ಚಿ ತೆಂಗಿನ ಮರಕೂ ಮೇಲೆ
ಜಗಲಿಯ ಮೇಲೆ ಕುಳಿತೆ ನಮಗೆ ಅಮ್ಮ ಟಾಟಾ ಹೇಳೆ ||೧||
ಹಾಗೆ ಹಾಗೆ ಮೇಲೆ ಹೋಗಿ ಮುಟ್ಟುತ್ತೇನೆ ಮೋಡ
ಕೇಳುತ್ತೇನೆ ಯಾರೂ ಕೇಳದ ಚುಕ್ಕಿ ಹಾಡೊ ಹಾಡ ||೨||
ತಿಂಗಳೂರಿನ ಅಂಗಳ ಸೇರಿ ಬೆಳ್ಳಿ ಮೊಲವನು ನೋಡಿ
ಹಿಡಿಯುತ್ತೇನೆ ಆರು ಬಣ್ಣದ ಜಿಂಕೆ ಹಾಗೆ ಮಾಡಿ ||೩||
ಕೊಟ್ಟೇ ಕೊಡುವನು ಚಂದಾಮಾಮ ಕೆನ್ನೆ ತುಂಬಾ ಮುದ್ದು
ಮುದ್ದಿಸಿ ಬೆಟ್ಟದ ತುದಿಗಿಳಿಸುವನು ಯಾರೂ ಇಲ್ಲದ ಹೊತ್ತು ||೪|

**3.**|| ಗಣೇಶ ಸ್ತುತಿ ||
ಫಲದಾಯಕ ನೀನೆ | ವಿನಾಯಕ ||ಪ||
ನೀ ಫಲದಾಯಕ ನೀನೆ | ವಿನಾಯಕ ||ಅ.ಪ||

ಭಜನಾರಂಭದಿ | ಭಜಿಸುವೆ ನಿನ್ನನು |
ಭಜನೆ ಸಿದ್ಧಿಪುದೆಮಗೆ | ವಿನಾಯಕ ||೧||

ಕಾರ್ಯಾರಂಭದಿ | ಭಜಿಸುವೆ ನಿನ್ನನು |
ಕಾರ್ಯ ಸಿದ್ಧಿಪುದೆಮಗೆ | ವಿನಾಯಕ ||೨||

ವಿದ್ಯಾರಂಭದಿ | ಭಜಿಸುವೆ ನಿನ್ನನು |
ವಿದ್ಯೆ ಸಿದ್ಧಿಪುದೆಮಗೆ | ವಿನಾಯಕ ||೩|

**4.**ತಾರಮ್ಮಯ್ಯ, ಯದುಕುಲ ವಾರಿಧಿ ಚಂದ್ರಮನ || ಪಲ್ಲವಿ ||
ಮಾರಜನಕನ ಮೋಹನಾಂಗನ ಸೇರಿ ಸುಖಿಸಲು ಹಾರೈಸಿ
ಬಂದೆವು || ಅನು ಪಲ್ಲವಿ ||

ಬಿಲ್ಲ ಹಬ್ಬಗಳಂತೆ, ಅಲ್ಲಿ ಬೀದಿ ಶೃಂಗಾರವಂತೆ
ಮಲ್ಲರ ಕಾಳಗ ಮದ್ದಾನೆಯಂತೆ
ಫುಲ್ಲಾಕ್ಷನು ತಾನಲ್ಲಿಗೆ ತೆರಳಿದ || ೧ ||

ಮಧುರಾಪುರಿಯಂತೆ, ಅಲ್ಲಿ ಮಾವ ಕಂಸನಂತೆ
ಒದಗಿದ ಮದಗಜ ತುರಗ ಸಾಲಿನಲಿ
ಮದಮೋಹನ ಕೃಷ್ಣ ಮಧುರೆಗೆ ತೆರಳಿದ || ೨ ||

ಅತ್ತೆ ಮಾವನ ಬಿಟ್ಟು, ಬಂದೆವು ಹಿತ್ತಲ ಬಾಗಿಲಿಂದ
ಭಕ್ತವತ್ಸಲನ ಬಹು ನಂಬಿದ್ದೆವು
ಉತ್ಸಾಹ ಭಂಗ ಮಾಡಿದನಮ್ಮ || ೩ ||

ರಂಗನ ಸೆರೆ ನಂಬಿ ಬಂದೆವು ಸಂಗ ಸುಖವ ಬಯಸಿ
ಭಂಗಿಸಿ ನಮ್ಮನು ಹ್ಯಾಂಗೆ ಪೋದನಮ್ಮ
ಮಂಗಳಮೂರುತಿ ಮದನಗೋಪಾಲನು || ೪ ||

ಶೇಷಗಿರಿಯ ಮೇಲೆ, ಹರಿ ತಾ ವಾಸವಾಗಿಹ ಕಾಣೆ
ಸಾಸಿರನಾಮದ ಒಡೆಯನೆಂದನಿಸಿದ
ಶ್ರೀಶ ಪುರಂದರವಿಠ್ಠಲರಾಯನ || ೫ ||
****
**5.** ಸಾರಿ ಬಂದನೆ ಪ್ರಾಣೇಶ ಬಂದನೆ || ಪಲ್ಲವಿ ||

ಸಾರಿ ಬಂದ ಲಂಕಾಪುರವ ಮೀರಿದ ರಾವಣನ ಕಂಡು
ಧೀರನು ವಯ್ಯಾರದಿಂದ || ಅನು ಪಲ್ಲವಿ ||

ವಾಯು ಪುತ್ರನೆ ಶ್ರೀರಾಮನ ದೂತನೆ ಪ್ರೀಯದಿಂದ
ಸೀತಾಂಗನೆಗೆ ಮುದ್ರಿಕೆಯ ತಂದಿತ್ತವನೆ || ೧ ||

ಭೀಮಸೇನನೆ ಕುಂತಿ ತನಯನೆ ವಿರಾಟನ ಮನೆಯಲ್ಲಿ
ನಿಂತು ಕೀಚಕನ ಸಂಹರಿಸಿದವನೆ || ೨ ||

ಮಧ್ವರಾಯನೆ ಸರ್ವಜ್ಞಶ್ರೇಷ್ಠ ಅದ್ವೈತವ ಗೆದ್ದು
ಪುರಂದರವಿಠಲನ ಮುಂದೆ ನಿಂತವನೆ || ೩ ||

**6.**ಪಾಲಯ ಪಾಲಯ ಪಾರ್ವತಿ ತನಯ ಪಾಶಾಂಕುಶ ಧರ ಜೀಯಾ ಜಯ ||ಪ||

ಪುರಹರ ಹರಸುತ ಸ್ಮರಿಸುವೆ ನಿನ್ನನು ಕರುಣದಿ ಮತಿಗಳ ನೀಡೋ ಜಯ ||೧||

ಬಾದರಾಯಣ ಸುತ ಭಾರತ ಲೇಖಕ ಭಾವಿಪೆ ನಿನ್ನನು ಜೀಯಾ ಜಯ ||೨||

ಸುಂದರ ಗಣಪತಿ ಬಂದ ವಿಘ್ನವ ಕಳೆ ಇಂದಿರೇಶನ ಬೇಗ ತೋರೋ ಜಯ ||೩||

**7.**ಅಂಬಿಗಾ ನಾ ನಿನ್ನ ನಂಬಿದೇ
ಜಗದಂಬರಮಣ ನಿನ್ನ ನಂಬಿದೇ
ತುಂಬಿದ ಹರಿಗೋಲಂಬಿಗ ಅದ ಕೊಂಬತ್ತು ಛಿದ್ರವು ಅಂಬಿಗಾ
ಸಂಭ್ರಮದಿಂ ನೊಡಂಬಿಗ ಅದರಿಂಬು ನೊಡೀ ನಡೆಸಂಬಿಗಾ || 1 ||

ಹೊಳೆಯ ಭರವ ನೊಡಂಬಿಗಾ ಅದಕೆ ಸೆಳವು ಘನವೈಯ್ಯ ಅಂಬಿಗಾ

ಸುಳಿಯೊಳು ಮುಳುಗಿದೆ ಅಂಬಿಗ ಎನ್ನ ಸೆಳೆದುಕೊಂಡೊಯ್ಯೊ ನೀನಂಬಿಗ || 2 ||

ಆರು ತೆರೆಯ ನೋಡಂಬಿಗ ಅದು ಮೀರಿ ಬರುತಲಿದೆ ಅಂಬಿಗ ಯಾರಿಂದಲಾಗದು ಅಂಬಿಗ ಅದ ನಿವಾರಿಸಿ ದಾಟಿಸೊ ಅಂಬಿಗ || 3 ||

ಸತ್ಯವೆಂಬುದೆ ಹುಟ್ಟಂಬಿಗ ಸದಾ ಭಕ್ತಿಯೆಂಬುದೆ ಪಥವಂಬಿಗಾ
ನಿತ್ಯ ಮುರುತಿ ಪುರಂದರ ವಿಟ್ಠಲ ನಮ್ಮಾ
ಮುಕ್ತಿಮಂಟಪಕೊಯ್ಯೊ ಅಂಬಿಗ || 4 ||

**8.**ಮೋದಕ ಪ್ರಿಯನ ಗಜಾನನ |
ಪಾಶಾಂಕುಶಧರ ಮೂಷಿಕವಾಹನ |
ಗಿರಿಜಾನಂದನ ದುರಿತನಿವಾರಣ ||

ಸಕಲವಿದ್ಯೆಯ ಬಲ್ಲ ಸಂಕಟನಾಶ |
ಅಕಳಂಕಚರಿತನ ಸುತ ಗಣೇಶ || ಪಂಕಜಾಸನಪ್ರಿಯ ಕಳೆಯೋ ಮನಕ್ಲೇಶ |
ಅಕ್ಕರದಿ ದಯಪಾಲಿಸೋ ಮನಹರುಷ ||1||

ಶುಕ್ಲಾಂಬರಧರ ಸಿದ್ಧಿವಿನಾಯಕ |
ಲೀಲಾಮಹಿಮನೇ ಮಂಗಳದಾಯಕ |ಸುಲಲಿತಮಹಿಮನೇ ಶರಣು ಸುಬೋಧಕ |
ಲೀಲೆಶರಧಿಯ ತೋರೋ ಭಕ್ತಸುಧಾರಕ ||2||

ಅಂಬರಾಧೀಶ್ವರ ಗೌರಿಕುಮಾರ |
ಲಂಬೋದರ ಭವವಿಘ್ನವಿದೂರ |ಅಭಿನವಜನಾರ್ದನವಿಠಲ ಉದಾರ |
ಅಭಯಹಸ್ತಧೀರ ದಯಾಸಾಗರ ||3||

**9.**ತೋಳು ತೋಳು ತೋಳು ರಂಗ ತೋಳನ್ನಾಡೈ ಸ್ವಾಮಿ |
ನೀಲವರ್ಣದ ಬಾಲಕೃಷ್ಣನೆ ತೋಳನ್ನಾಡೈ ||ಪ||

ಹುಲಿಯುಗುರರಳೆಲೆ ಮಾಗಾಯಿಗಳನಿಟ್ಟ ತೋಳನ್ನಾಡೈ ಸ್ವಾಮಿ |
ಘಲಿರೆಂಬಂದುಗೆ ಗೆಜ್ಜೆಲಿ ನಲಿವುತ್ತ ತೋಳನ್ನಾಡೈ |
ನೆಲುವಿಗೆ ನಿಲುಕದೆ ಒರಳ ತಂದಿಟ್ಟ ತೋಳನ್ನಾಡೈ ಸ್ವಾಮಿ |
ಚೆಲುವ ಮಕ್ಕಳ ಮುದ್ದು ಮಾಣಿಕವೆ ತೋಳನ್ನಾಡೈ ||

ಮಾತೆಯ ಪಿತನ ಅಣುಗನ ಮಡುಹಿದ ತೋಳನ್ನಾಡೈ|
ಪೂತನಿಯೆಂಬವಳಸುವನೆ ಹೀರಿದ ತೋಳನ್ನಾಡೈ ಸ್ವಾಮಿ |
ಮಾತಿಗೆ ಶಿಶುಪಾಲನ ಶಿರತರಿದ ತೋಳನ್ನಾಡೈ ಸ್ವಾಮಿ |
ಶ್ರೀ ತುಲಸಿಯ ಪ್ರಿಯ ನಿತ್ಯವಿನೋದಿ ತೋಳನ್ನಾಡೈ ||

ದಟ್ಟಡಿಯಿಡುತಲೆ ಬೆಣ್ಣೆಯ ಮೆಲುವ ತೋಳನ್ನಾಡೈ ಸ್ವಾಮಿ |
ಕಟ್ಟಿದ ಕರಡಿಯ ಕರುವೆಂದೆಳೆದ ತೋಳನ್ನಾಡೈ |
ಬಟ್ಟಲ ಹಾಲ ಒಲ್ಲೆಂದು ಕಾಡಿದ ತೋಳನ್ನಾಡೈ ಸ್ವಾಮಿ |
ಬಟ್ಟಲೊಳುಣವಿಸೆ ನಗುವಾತನೆ ತೋಳನ್ನಾಡೈ ||

ಸಜ್ಜನ ಸತ್ಯಕೆ ಧರ್ಮವ ನಡೆಸಿದ ತೋಳನ್ನಾಡೈ ಸ್ವಾಮಿ |
ಅರ್ಜುನ ರಥಕೆ ಸಾರಥ್ಯ ಮಾಡಿದ ತೋಳನ್ನಾಡೈ |
ಲಜ್ಜೆಗೇಡಾದ ದ್ರೌಪದಿ ಕಾಯ್ದ ತೋಳನ್ನಾಡೈ ಸ್ವಾಮಿ |
ವಜ್ರಪಂಜರ ಪಾಂಡವಪ್ರಿಯ ತೋಳನ್ನಾಡೈ ||

ನಖದಿಂದ ಹಿರಣ್ಯಕನುದರ ಬಗಿದ ತೋಳನ್ನಾಡೈ ಸ್ವಾಮಿ |
ಸುಖದಿಂದಲಿ ಪ್ರಹ್ಲಾದನ ಕಾಯ್ದ ತೋಳನ್ನಾಡೈ |
ವಿಖಳಿತಗೆಡಿಸಿದ ಗೋಪಸ್ತ್ರೀಯರ ತೋಳನ್ನಾಡೈ |
ಸ್ವಾಮಿ ಸುಖತೀರ್ಥರ
ಪತಿ **ಪುರಂದರವಿಠಲ** ತೋಳನ್ನಾಡೈ ||

**10.**ಬಾರೆ ನಮ್ಮ ಮನಿತನಕ ಭಾಗ್ಯದ ದೇವಿ |ಪ|
ಬಾರೆ ನಮ್ಮ ಮನಿತನಕ ಬಹಳ ಕರುಣದಿಂದ ಜೋಡಿಸಿ
ಕರಗಳ ಎರಗುವೆ ಚರಣಕೆ |ಅ ಪ|
ಜರದ ಪೀತಾಂಬರ ನೀರಿಗೆಗಳ್ ಹೊಳೆಯುತ
ಸರಗಿ ಸರವು ಚಂದ್ರ ಹಾರಗಳ್ ಹೊಳೆಯುತ ‖ ೧ ‖
ಹರಡಿ ಕಂಕಣ ದುಂಡು ಕರದಲ್ಲಿ ಹೊಳೆಯುತ
ತರುಳನ ಮ್ಯಾಲೆ ತಾಯೆ ಕರುಣವಿಟ್ಟು ಬೇಗನೇ ‖ ೨ ‖
ಮಂದ ಗಮನೆ ನಿನಗೆ ವಂದಿಸಿ ಬೇಡುವೆ
ಇಂದಿರೇಶನ ಕೂಡ ಇಂದು ನಮ್ಮ ಮನಿತನಕ ‖ ೩ ‖

**11.**ಇರಬೇಕು ಇರುವಂತೆ ತೊರೆದು ಸಾವಿರ ಚಿಂತೆ
ಮಳೆ ಸುರಿಸಿ ಹಗುರಾದ ಮುಗಿಲಿನಂತೆ ||ಪ||

ತನ್ನೊಡಲ ತಾರೆಗಳ ಗುಡಿಸಿ ರಾಶಿಯ ಮಾಡಿ
ಬೆಳಕಿನುಂಡೆಯ ಬಾನಿಗುರುಳು ಬಿಟ್ಟು
ಹೇಗೆ ಮರೆಯಾಗುವುದೊ ನಿರ್ಧನಿಕ ನಟ್ಟಿರುಳು
ಹಾಗೆ ಬಾಳಿಸು ಗುರುವೆ ಕರುಣೆಯಿಟ್ಟು ||

ತಾನು ಬಿಸಿಲಲಿ ನಿಂತು ತನ್ನ ಬಳಿ ಬರುವವಗೆ
ತಣ್ಣಗಿನ ಆಸರೆಯ ನೆರಳ ಕೊಟ್ಟು
ಹೇಗೆ ಗೆಲುವಾಗುವುದೋ ಹಸಿರೆಲೆಯ ಹೊಂಗೆ ಮರ
ಹಾಗೆ ಬಾಳಿಸು ಗುರುವೆ ಪ್ರೀತಿಯಿಟ್ಟು||೧||

ತಾನು ಕೆಸರಲಿ ಕುಸಿಯುತ್ತಿದ್ದರೂ ತಾವರೆಯು
ಮರಿದುಂಬಿಗಳ ಪೊರೆವ ತೊಟ್ಟಿಲಾಗಿ
ಹೇಗೆ ತಾಯ್ತನವನ್ನು ಪ್ರೀತಿಯಲಿ ಮೆರೆಯುವುದೋ
ಹಾಗೆ ಬಾಳಿಸು ಗುರುವೆ ಕರುಣೆಯಿಟ್ಟು||

ದಾರಿಯುದ್ದಕೂ ಪೈರು ನಗುವಂತೆ ನೀರುಣಿಸಿ
ಹಾಲುತೆನೆಯಲಿ ಅಮೃತ ತುಂಬಿ ನದಿಯು
ಹೇಗೆ ದೂರದ ನೀಲಿಯಲ್ಲಿ ಕೊನೆಗೊಳ್ಳುವುದೋ
ಹಾಗೆ ಕೊನೆಗಾಣಿಸು ಕೃಪೆಯನಿಟ್ಟು||೨||

**12.**ಬಾರೆ ಭಾಗ್ಯದ ನಿಧಿಯೇ ಕರವೀರ
ನಿವಾಸಿನಿ ಸಿರಿಯೆ ||ಪ||
ಬಾರೆ ಬಾರೆ ಕರವೀರ ನಿವಾಸಿನಿ ಬಾರಿಬಾರಿಗು ಶುಭ
ತೋರು ನಮ್ಮ ಮನಗೆ ||ಅ.ಪ||

ಲೋಕಮಾತೆಯು ನೀನು ನಿನ್ನ ತೋಕನಲ್ಲವೆ ನಾನು
ಆಕಳು ಕರುವಿನ ಸ್ವೀಕರಿಸುವಪರಿ
ನೀ ಕರುಣದಿ ಕಾಲ್ಹಾಕು ನಮ್ಮ ಮನಗೆ ||1||

ನಿಗಮ ವೇದ್ಯಳೆ ನಿನ್ನ ನಾ ಪೊಗಳಲಾಪೆನಲ್ಲ
ಮಗನಪ ರಾಧವ ತೆಗೆದೆಣಿಸದಲೆ ಲಗು
ಬಗೆಯಿಂದಲಿ ಪನ್ನಗವೇಣಿ ||2||

ಕಡೆಗೆ ನಮ್ಮನೆ ವಾಸ ಒಡೆಯ ‘ಅನಂತಾದ್ರೀಶ’
ಒಡೆಯನಿದ್ದಲ್ಲಿಗೆ ಮಡದಿಯು ಬಾಹೊದು
ರೂಢಿಗುಚಿತವಿದು ನಡೆ ನಮ್ಮ ಮನೆಗೆ ||3||

**13.**ರಾಮನಾಮ ಭಜಿಸಿದವಗೆ
ಉಂಟೆ ಭವದ ಬಂಧನ ||ಪ||

ಕಾಮ ಹರನ ಸತಿಯು ಸದಾ
ನೇಮದಿಂದ ನೆನೆವ ಶ್ರೀರಾಮ ನಾಮ ||ಅಪ||

ಶಿವನು ಧನ್ಯನಾದ ಮೌನಿ|
ಯುವತಿ ಪಾರ್ವತಿ ಪಾವನಿ ಯಾದಳು||
ರವಿಯ ಸುತನು ವರವ ಪಡೆದ |
ಧ್ರುವನು ದಿವಿಜ ನೆನಿಸಿದ ||೧||

ಕರಿವರ ಪ್ರಹ್ಲಾದ ದ್ರೌಪದಿ |
ವರ ವಿಭೀಷಣರೆಲ್ಲರೂ ||
ಹರಿಯ ನಾಮ ಸ್ಮರಿಸಿ ಸುಖ-|
ಭರಿತರಾಗಲಿಲ್ಲವೇ ||೨||

ಗಿರಜೆ ರಾಮ ಮಂತ್ರದಿಂದ |
ಪರಮ ಮಂಗಳೆಯಾದಳು ||
ವರದ ಗೋಪಾಲ ವಿಠಲ ನಾಮ
ದುರಿತಕಾನನ ಪಾವಕ ||೩||
****

**14.**ಬಂದೇವಯ್ಯಾ ಗೋವಿಂದ ಶೆಟ್ಟಿ
ನಿಮ್ಮ ಹರಿವಾಣ ತೀರ್ಥ ಪ್ರಸಾದ ಉಂಟೆನಲಾಗಿ ||ಪಲ್ಲವಿ||

ಅಪ್ಪವು ಅತಿರಸ ತುಪ್ಪವು ಬಿಸಿ ಹಾಲು
ಒಪ್ಪುವ ಸಕ್ಕರೆ ಯಾಲಕ್ಕಿಯು
ಅಪರೂಪವಾದ ಕಜ್ಜಾಯಗಳನೆಲ್ಲ
ಛಪ್ಪನ್ನ ದೇಶಕ್ಕೆ ಮಾರುವ ಶೆಟ್ಟಿ ||೧||

ಒಡೆದ ಮಡಕೆ ತಂದು ಅರೆದು ನಾಮವ ಮಾಡಿ
ಕೊಡುವೆ ನೀ ಕಾಸಿಗೆ ಒಂದೊಂದಾಗಿ
ಒಡಲು ತುಂಬಿ ಮಿಕ್ಕ ಅನ್ನವ ಮಾರಿಸಿ
ಒಡವೆಯ ಗಳಿಸುವ ಕಡುಲೋಭಿ ಶೆಟ್ಟಿ ||೨||

ಶೇಷಗಿರಿಯಲಿ ವಾಸವಾಗಿಹ ಶೆಟ್ಟಿ
ದೇಶದೇಶದೊಳು ಹೆಸರಾದ ಶೆಟ್ಟಿ
ಕಾಸು ಕಾಸಿಗೆ ಬಡ್ಡಿ ಗಳಿಸಿಕೊಂಬ
**ಆದಿಕೇಶವ** ನಾರಾಯಣ ತಿಮ್ಮ ಶೆಟ್ಟಿ ||೩||

# Dara Bendre songs only for 4th – 7th std students

## 1.

ಘಮ ಘಮ ಘಮಾಡಸ್ತಾವ ಮಲ್ಲಿಗೀ...

ನೀ ಹೊರಟಿದ್ದೀಗ ಎಲ್ಲಿಗೀ..

ನೀ...ಹೊರಟಿದ್ದೀಗ ಎಲ್ಲಿಗೀ ..

ಘಮ ಘಮ ಘಮಾಡಸ್ತಾವ ಮಲ್ಲಿಗೀಇ..ಈ..ಈ..

ನೀ ಹೊರಟಿದ್ದೀಗ ಎಲ್ಲಿಗೀ..

ನೀ..ಹೊರಟಿದ್ದೀಗ ಎಲ್ಲಿಗೀ ..

ತುಳುಕ್ಯಾಡತಾವ ತೂಕಡಿಕಿ..

ಎವಿ ಅಪ್ಪತಾವ ಕಣ್ ದುಡುಕಿ..

ತುಳುಕ್ಯಾಡತಾವ ತೂಕಡಿಕಿ

ಎವಿ ಅಪ್ಪತಾವ ಕಣ್ ದುಡುಕಿ

ಕನಸು ತೇಲಿ ಬರತಾವ ಹುಡುಕಿಇ..ಈ..ಈ..ಈ..

ಕನಸು ತೇಲಿ ಬರತಾವ ಹುಡುಕಿ..

ನೀ ಹೊರಟಿದ್ದೀಗ ಎಲ್ಲಿಗೀ...

ನೀ...ಹೊರಟಿದ್ದೀಗ ಎಲ್ಲಿಗೀ ..

ಘಮ ಘಮ ಘಮಾಡಸ್ತಾವ ಮಲ್ಲಿಗೀಇ..ಈ..ಈ..

ನೀ ಹೊರಟಿದ್ದೀಗ ಎಲ್ಲಿಗೀ...

ನೀ...ಹೊರಟಿದ್ದೀಗ ಎಲ್ಲಿಗೀ ..

ಚಿಕ್ಕಿ ತೋರಸ್ತಾವ ಚಾಚಿ ಬೆರಳ

ಚಂದ್ರಾಮ ಕನ್ನಡಿ ಹರಳ..ಅ..ಅಅಅ ಅ...

ಚಿಕ್ಕಿ ತೋರಸ್ತಾವ ಚಾಚಿ ಬೆರಳ..

ಚಂದ್ರಾಮ ಕನ್ನಡಿ ಹರಳ..

ಮನಸೋತು ಆಯಿತು ಮರುಳ..ಅ..ಅಅಅ ಅ..

ಮನಸೋತು ಆಯಿತು ಮರುಳ..

ನೀ ಹೊರಟಿದ್ದೀಗ ಎಲ್ಲಿಗೀ...

ನೀ...ಹೊರಟಿದ್ದೀಗ ಎಲ್ಲಿಗೀ ..

ಘಮ ಘಮ ಘಮಾಡಸ್ತಾವ ಮಲ್ಲಿಗೀಇ..ಈ..ಈ..

ನೀ ಹೊರಟಿದ್ದೀಗ ಎಲ್ಲಿಗೀ...

ನೀ...ಹೊರಟಿದ್ದೀಗ ಎಲ್ಲಿಗೀ ..

ನೆರಳಲ್ಲಾಡತಾವ ಮರದ ಬುಡಕ..

ಕೇರಿ,ಕೇರಿ ನೂಗುತ್ತಾವ ದಡಕ..ಅ..ಅಅಅ ಅ..

ನೆರಳಲ್ಲಾಡತಾವ ಮರದ ಬುಡಕ..

ಕೇರಿ,ಕೇರಿ ನೂಗುತ್ತಾವ ದಡಕ..

ಹಿಂಗ ಬಿಟ್ಟು ಇಲ್ಲಿ ನನ್ನ ನಡಕ..ಅ..ಅಅಅ ಅ....

ಹಿಂಗ ಬಿಟ್ಟು ಇಲ್ಲಿ ನನ್ನ ನಡಕ

ನೀ ಹೊರಟಿದ್ದೀಗ ಎಲ್ಲಿಗೀ...

ನೀ...ಹೊರಟಿದ್ದೀಗ ಎಲ್ಲಿಗೀ ..

ಘಮ ಘಮ ಘಮಾಡಸ್ತಾವ ಮಲ್ಲಿಗೀಇ..ಈ..ಈ..

ನೀ ಹೊರಟಿದ್ದೀಗ ಎಲ್ಲಿಗೀ...

ನೀ...ಹೊರಟಿದ್ದೀಗ ಎಲ್ಲಿಗೀ ..

ಘಮ ಘಮ ಘಮಾಡಸ್ತಾವ ಮಲ್ಲಿಗೀಇ..ಈ..ಈ..

ನೀ ಹೊರಟಿದ್ದೀಗ ಎಲ್ಲಿಗೀ..

ನೀ..ಹೊರಟಿದ್ದೀಗ ಎಲ್ಲಿಗೀ ..

ನೀ ಹೊರಟಿದ್ದೀಗ ಎಲ್ಲಿಗೀ..

ನೀ..ಹೊರಟಿದ್ದೀಗ ಎಲ್ಲಿಗೀ ..

## 2.

ಶ್ರಾವಣಾ ಬಂತು ಕಾಡಿಗೆ| ಬಂತು ನಾಡಿಗೆ|

ಬಂತು ಬೀಡಿಗೆ| ಶ್ರಾವಣಾ ಬಂತು || ಪಲ್ಲವಿ ||

ಕಡಲಿಗೆ ಬಂತು ಶ್ರಾವಣಾ| ಕುಣಿಧ್ಹಾಂಗ ರಾವಣಾ|

ಕುಣಿದಾವ ಗಾಳಿ| ಭೈರವನ ರೂಪತಾಳಿ || ಅನುಪಲ್ಲವಿ ||

ಶ್ರಾವಣಾ ಬಂತು ಘಟ್ಟಕ್ಕ| ರಾಜ್ಯಪಟ್ಟಕ್ಕ|

ಬಾನು ಮಟ್ಟಕ್ಕ|

ಏರ್ಯಾವ ಮುಗಿಲು| ರವಿ ಕಾಣೆ ಹಾಡೆಹಗಲು|

ಬೆಟ್ಟ ತೊಟ್ಟಾವ ಕುತನಿಯ ಅಂಗಿ|

ಹಸಿರು ನೋಡ ತಂಗಿ|

ಹೊರಟಾವೆಲ್ಲೊ ಜಂಗಿ|

ಜಾತ್ರಿಗೇನೋ| ನೆರೆದsದ ಇಲ್ಲೆ ತಾನೋ||

ಬನಬನ ನೋಡು ಈಗ ಹ್ಯಾಂಗ|

ಮದುವಿ ಮಗನ್ಹಾಂಗ

ತಲಿಗೆ ಬಾಸಿಂಗ|

ಕಟ್ಟಿಕೊಂಡೂ| ನಿಂತಾವ ಹರ್ಷಗೊಂಡು||

ಸಾಹಿತ್ಯ – ದ. ರಾ. ಬೇಂದ್ರೆ

## 3.

ಹೊಸ ದ್ವೀಪಗಳಿಗೆ ಹೊರಟಾನ ಬನ್ನಿ ಅಂದದೋ ಅಂದದ (೨)

ಬಂಗಾರ ನೀರ ಕಡಲಾಚೆಗೀಚೆಗಿದೆ ನೀಲ ನೀಲ ತೀರ
ಮಿಂಚು ಬಳಗ ತೆರೆತೆರೆಗಳಾಗಿ ಅಲೆಯುವುದು ಪುಟ್ಟ ಪೂರ
ಅದು ನಮ್ಮ ಊರು ಇದು ನಿಮ್ಮ ಊರು ತಮ್ ತಮ್ಮ
ಊರೋ ಧೀರ
ಅದರೊಳಗೆ ನಾವು ನಮ್ಮೊಳಗೆ ತಾವು ಅದು ಇಲ್ಲವಣ್ಣ ದೂರ
||

ಕರೆ ಬಂದಿತಣ್ಣ ತೆರೆ ಬಂದಿತಣ್ಣ ನೆರೆ ಬಂದಿತಣ್ಣ ಬಳಿಗೆ
ಹರಿತದ ಭಾವ ಬೆರಿತದ ಜೀವ ಅದರೊಳಗೆ ಒಳಗೆ ಒಳಗೆ
ಇದೆ ಸಮಯವಣ್ಣ ಇದೆ ಸಮಯ ತಮ್ಮ ನಮ್ ನಿಮ್ಮ
ಆತ್ಮಗಳಿಗೆ
ಅಂಬಿಗನು ಬಂದ ನಂಬಿಗನು ಬಂದ ಬಂದದ ದಿವ್ಯ ಘಳಿಗೆ ||

ಇದು ಉಪ್ಪು ನೀರ ಕಡಲಲ್ಲೋ ನಮ್ಮ ಒಡಲಲ್ಲು ಇದರ
ನೆಲೆಯು
ಕಂಡವರಿಗಲ್ಲೊ ಕಂಡವರಿಗಷ್ಟೇ ತಿಳಿದದಾ ಇದರ ಬೆಲೆಯು
ಸಿಕ್ಕಲ್ಲಿ ಅಲ್ಲ ಸಿಕ್ಕಲ್ಲೆ ಮಾತ್ರ ಒಡೆಯುವುದು ಇದರ ಸೆಲೆಯು
ಕಣ್ ಅರಳಿದಾಗ ಕಣ್ ಹೊರಳಿದಾಗ ಹೊಳೆಯುವುದು ಇದರ
ಕಳೆಯು ||

ಬಂದವರ ಬಳಿಗೆ ಬಂದದ ಮತ್ತು ನಿಂದವರ ನೆರೆಗೂ
ಬಂದದೋ ಬಂದದ
ನವ ಮನು ಬಂದ ಹೊಸ ದ್ವೀಪಗಳಿಗೆ ಹೊರಟಾನ ಬನ್ನಿ
ಅಂದದೋ ಅಂದದ ||

*** ದ.ರಾ.ಬೇಂದ್ರೆ ***

## 4.

ಕುರುಡು ಕಾಂಚಾಣ ಕುಣಿಯುತ್ತಲಿತ್ತು!
ಕಾಲಿಗೆ ಬಿದ್ದವರ ತುಳಿಯುತ್ತಲಿತ್ತೋ ||
ಕುರುಡು ಕಾಂಚಾಣ || ಪಲ್ಲವಿ ||

೧
ಬಾಣಂತಿಯೆಲುಬ ಸಾ-
ಬಾಣದ ಬಿಳುಪಿನಾ
ಕಾಣದ ಕಿರುಗೆಜ್ಜೆ ಕಾಲಾಗ ಇತ್ತೋ;
ಸಣ್ಣ ಕಂದಮ್ಮಗಳ
ಕಣ್ಣೀನ ಕವಡೀಯ
ತಣ್ಣನ್ನ ಜೋಮಾಲೆ ಕೊರಳೊಳಗಿತ್ತೋ;

೨
ಬಡವರ ಒಡಲಿನ
ಬಡಬಾಽನಲದಲ್ಲಿ
ಸುಡು ಸುಡು ಪಂಜು ಕೈಯೊಳಗಿತ್ತೋ;
ಕಂಬನಿ ಕುಡಿಯುವ
ಹುಂಬ ಬಾಯಿಲೆ ಮೈ -
ದುಂಬಿಯಂತುಧೋ ಉಧೋ ಎನ್ನುತಲಿತ್ತೋ.

೩
ಕೂಲಿ ಕುಂಬಳಿಯವರ
ಪಾಲಿನ ಮೈದೊಗಲ
ಧೂಳಿಯ ಭಂಡಾರ ಹಣೆಯೊಳಗಿತ್ತೋ;
ಗುಡಿಯೊಳಗೆ ಗಣಣ, ಮಾ -
ಹಡಿಯೊಳಗ ತನನ, ಅಂ -
ಗಡಿಯೊಳಗೆ ಝಣಣಣ ನುಡಿಗೊಡುತಿತ್ತೋ.

೪
ಹ್ಯಾಂಗಾರೆ ಕುಣಿಕುಣಿದು
ಮಂಗಾಟ ನಡೆದಾಗ
ಅಂಗಾತ ಬಿತ್ತೋ, ಹೆಗಲಲಿ ಎತ್ತೋ.

*** ದ.ರಾ.ಬೇಂದ್ರೆ ***

## 5.
## ನಾಕು ತಂತಿ

### ಒಂದು

೧
ಆವು ಈವಿನ
ನಾವು ನೀವಿಗೆ
ಆನು ತಾನದ
ತನನನಾS
೨
ನಾನು ನೀನಿನ
ಈ ನಿನಾನಿಗೆ
ಬೇನೆ ಏನೋ?
ಜಾಣಿ ನಾS
೩
ಚಾರು ತಂತ್ರಿಯ
ಚರಣ ಚರಣದ
ಘನಘನಿತ ಚತು-
-ರಸ್ವನಾ
೪
ಹತವೊ ಹಿತವೋ
ಆ ಅನಾಹತಾ
ಮಿತಿಮಿತಿಗೆ ಇತಿ
ನನನನಾ
೫
ಬೆನ್ನಿನಾನಿಕೆ
ಜನನ ಜಾನಿಕೆ
ಮನನವೇ ಸಹಿ-
ತಸ್ತನಾ.

### ಮೂರು

೧
'ಚಿತ್ತೀಮಳಿ, ತತ್ತೀ ಹಾಕತಿತ್ತು
ಸ್ವಾತಿ ಮುತ್ತಿನೊಳಗ
ಸತ್ತಿSಯೊ ಮಗನS
ಅಂತ ಕೂಗಿದರು
ಸಾವೀ ಮಗಳು, ಭಾವೀ ಮಗಳು
ಕೂಡಿ'
೨
'ಈ ಜಗ, ಅಪ್ಪಾ, ಅಮ್ಮನ ಮಗ
ಅಮ್ಮನೊಳಗ ಅಪ್ಪನ ಮೊಗ
ಅಪ್ಪನ ಕತ್ತಿಗೆ ಅಮ್ಮನ ನೊಗ
ನಾ ಅವರ ಕಂದ
ಶ್ರೀ ಗುರುದತ್ತ ಅಂದ.'

### ನಾಕು

೧
'ನಾನು' 'ನೀನು'
'ಆನು' 'ತಾನು'
ನಾಕೆ ನಾಕು ತಂತಿ,
೨
ಸೊಲ್ಲಿಸಿದರು
ನಿಲ್ಲಿಸಿದರು
ಓಂ ಓಂ ದಂತಿ!
ಗಣನಾಯಕ
ಮೈ ಮಾಯಕ
ಸೈ ಸಾಯಕ ಮಾಡಿ
ಗುರಿಯ ತುಂಬಿ
ಕುರಿಯ ಕಣ್ಣು
ಧಾತು ಮಾತು
ಕೂಡಿ.

- ಅಂಬಿಕಾತನಯದತ್ತ
(ದ.ರಾ.ಬೇಂದ್ರೆ)